# ಶ್ರೀಮಾತೆ ಶಾರದಾದೇವಿ

ಬಂಗಾಳಿ ಮೂಲ: **ಸ್ವಾಮಿ ಮಾಧವಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರ ಶಿಷ್ಯರಾಗಿದ್ದ ಸ್ವಾಮಿ ಮಾಧವಾನಂದರು (೧೮೮೮-೧೯೬೫) ರಾಮಕೃಷ್ಣ ಮಹಾಸಂಘದ ೯ನೇ ಪರಮಾಧ್ಯಕ್ಷರಾಗಿದ್ದರು. ಶ್ರೇಷ್ಠ ವಿದ್ವಾಂಸರೂ ಆಗಿದ್ದ ಅವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಶಾಂಕರಭಾಷ್ಯಸಮೇತವಾದ ಬೃಹದಾರಣ್ಯಕ ಉಪನಿಷತ್ತಿನ ಇಂಗ್ಲಿಷ್ ಅನುವಾದ ಇದರಲ್ಲಿ ಪ್ರಮುಖವಾಗಿದೆ. ಈ ಲೇಖನವನ್ನು '**ಶ್ರೀ ಶ್ರೀ ಮಾಯೇರ್ ಪದಪ್ರಾಂತೇ**' ಬಂಗಾಳಿ ಕೃತಿಯ ೩ ನೇ ಸಂಪುಟದಿಂದ ಅನುವಾದಿಸಲಾಗಿದೆ.

ಭಗವಾನ್ ಶ್ರೀರಾಮಕೃಷ್ಣ ದೇವರ ಮಹಾಶಕ್ತಿಯಾದ ಶ್ರೀಮಾತೆಯವರು ತಮ್ಮನ್ನು ತಾವು ಗೋಪ್ಯವಾಗಿಟ್ಟುಕೊಂಡು, ತಮ್ಮ ದಿವ್ಯಜೀವನವನ್ನು ನಡೆಸಿದ್ದರು. ಆದರೆ ಅವರ ದಿವ್ಯ ಪ್ರಭಾವವು ಸದ್ದಿಲ್ಲದೆ ದೇಶವಿದೇಶಗಳಲ್ಲಿ ಅಸಂಖ್ಯಾತ ಮಂದಿ ಸ್ತ್ರೀಪುರುಷರ ಹೃದಯದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ಇಲ್ಲದೆ ಹೋಗಿದ್ದರೆ, ಶ್ರೀಮಾತೆಯವರನ್ನು ಪ್ರತ್ಯಕ್ಷ ನೋಡದೆ ಇದ್ದರೂ, ಅವರ ಹೆಸರಿನಲ್ಲಿ ವಿಭಿನ್ನ ದರ್ಜೆಯ ಜನರಲ್ಲಿ ಇಂತಹ ಭಾವೋನ್ಮಾದ ಉಂಟಾಗುತ್ತಿರಲಿಲ್ಲ. ಶ್ರೀಮಾತೆಯವರ ಜನ್ಮಸ್ಥಳವಾದ ಜಯರಾಮಬಾಟಿಯಲ್ಲಿ ಅವರ ಚಂದ್ರಕಾಂತ ಶಿಲೆಯ ವಿಗ್ರಹದ ಪ್ರತಿಷ್ಠಾಪನೆಯ ಸಂದರ್ಭದಲ್ಲಿ, ದೈಹಿಕ ಸುಖ ಸೌಲಭ್ಯಗಳ ಕಡೆಗೆ ಸಂಪೂರ್ಣ ಉದಾಸೀನಭಾವವನ್ನು ಹೊಂದಿದ್ದ ಸಾವಿರಾರು ಜನ ಸ್ತ್ರೀಪುರುಷರು ಅಪೂರ್ವವಾದ ಆನಂದವನ್ನು ಅನುಭವಿಸಿದ್ದರು; ಅದನ್ನೆಂದಿಗೂ ಮರೆಯಲು ಸಾಧ್ಯವಿಲ್ಲ. ಇಲ್ಲಿ ಶ್ರೀಚೈತನ್ಯ ದೇವರ ಅದ್ಭುತ ಆಕರ್ಷಣೆಯ ವಿಷಯವನ್ನು ನೆನಪಿಗೆ ತಂದುಕೊಳ್ಳಬೇಕು. ವಾಸ್ತವವೇನೆಂದರೆ, ಎಲ್ಲಿ ಈಶ್ವರೀ ಶಕ್ತಿಯ ವಿಕಾಸವುಂಟಾಗುವುದೋ ಅಲ್ಲೆಲ್ಲ ಹೀಗೇ ನಡೆಯುವುದು.

ಸ್ವಾಮಿ ವಿವೇಕಾನಂದರ ಅತ್ಯುತ್ತಮ ಸಹೋದರ-ಸಂನ್ಯಾಸಿಯಾಗಿದ್ದ ಸ್ವಾಮಿ ಪ್ರೇಮಾನಂದರು ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ಯಾವ ವಿಷಯವನ್ನು ನನಗೆ ಜೀರ್ಣಿಸಿಕೊಳ್ಳಲಾಗದೋ, ಅದನ್ನೆಲ್ಲ ಶ್ರೀಮಾತೆಯವರ ಕಡೆಗೆ ಕಳುಹಿಸಿ ಬಿಡುತ್ತೇನೆ. ಶ್ರೀಮಾತೆ ಎಲ್ಲವನ್ನೂ ತಮ್ಮ ಮಡಿಲಿಗೆ ಸೆಳೆದುಕೊಳ್ಳುತ್ತಾರೆ. ಅನಂತ ಶಕ್ತಿ! ಅಪಾರ ಕರುಣೆ!... ಸ್ವತಃ ಶ್ರೀರಾಮಕೃಷ್ಣರೂ ಹೀಗೆ ಮಾಡಿದ್ದನ್ನು ಕಂಡಿಲ್ಲ. ಅವರು ಎಷ್ಟೊಂದು ಅಳೆದು-ಸುರಿದು ನೋಡಿ ಶಿಷ್ಯಂದಿರನ್ನು ಆರಿಸಿಕೊಳ್ಳುತ್ತಿದ್ದರು! ಆದರೆ ಇಲ್ಲಿಯಾದರೋ — ಶ್ರೀಮಾತೆಯವರ ಬಳಿ ಏನನ್ನು ನೋಡುತ್ತೀಯಾ? ಅದ್ಭುತ! ಅದ್ಭುತ! ಎಲ್ಲರಿಗೂ ಅವರು ಆಶ್ರಯ ಕೊಡುತ್ತಿದ್ದಾರೆ, ಎಲ್ಲರಿಂದಲೂ ಆಹಾರ ಸ್ವೀಕರಿಸುತ್ತಾರೆ, ಎಲ್ಲವೂ ಇಲ್ಲಿ ಜೀರ್ಣವಾಗಿ ಹೋಗುತ್ತದೆ. ಮಾತೆ, ಮಾತೆ! ಜೈ ಶ್ರೀಮಾತೆ!

ಶ್ರೀಮಾತೆಯವರ ಬಾಗಿಲು ಹೀಗೆ ಯಾವಾಗಲೂ ತೆರೆದಿತ್ತು ಎಂಬ ಕಾರಣದಿಂದಲೇ ನಮ್ಮಂತಹ ಅನೇಕರು ಅವರ ಬಳಿ



ಆಶ್ರಯ ಪಡೆದೆವು. ೧೯೧೯ ನೇ ಇಸವಿಯ ಒಂದು ದಿನ ನಡೆದ ವಿಷಯ ನೆನಪಿಗೆ ಬರುತ್ತಿದೆ. ಆಗ ಪೂಜ್ಯ ಶಶಿ ಮಹಾರಾಜರು (ಸ್ವಾಮಿ ರಾಮಕೃಷ್ಣಾನಂದರು) ಬಲರಾಮ ಬಾಬುವಿನ ಮನೆಯಲ್ಲಿ (ಈಗಿನ 'ಬಲರಾಮ ಮಂದಿರ'ದಲ್ಲಿ) ಇದ್ದರು. ಆಧ್ಯಾತ್ಮಿಕ ಜೀವನಕ್ಕೆ ಅತ್ಯಂತ ಸಹಾಯಕವಾದ ನಾಲ್ಕಾರು ಮಾತುಗಳನ್ನು ಆಡಿದ ನಂತರ ಅವರು ಈ ಲೇಖಕನಿಗೆ ತಿಳಿಸಿದರು: ''ಅದೇ ರೀತಿ, ಶ್ರೀಮಾತೆಯವರಿಂದ ದೀಕ್ಷೆ ತೆಗೆದುಕೋ. ಹಾಗೆ ಮಾಡಿದರೆ ಎಲ್ಲವೂ ಸಾಧ್ಯವಾಗುವುದು.''[೧] ನಿಜವಾಗಿಯೂ ಅವರು ಶ್ರೀಮಾತೆಯವರ ಮಹಿಮೆಯನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡಿದ್ದರು, ಹಾಗೂ ಶ್ರೀಮಾತೆಯವರ ಬಳಿ

೧ ಬೇಲೂರು ಮಠದ ಹಿರಿಯ ಸಂನ್ಯಾಸಿಗಳ ಮೂಲಕ ತಿಳಿದು ಬಂದಿದ್ದೇನೆಂದರೆ, ಸ್ವತಃ ಸ್ವಾಮಿ ಮಾಧವಾನಂದರೇ ಅವರಿಗೆ ಹೇಳಿದ್ದರಂತೆ, ಈ ಘಟನೆಯ ನಂತರವೇ (೧೯೧೯ರಲ್ಲಿ) ಅವರು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು ಎಂಬುದಾಗಿ. *(-ಸಂ)*

ಯಿದ್ದಾಗ ಅತ್ಯಂತ ಸಂಭ್ರಮದಿಂದ ಇರುತ್ತಿದ್ದರು. ಮಾನವನು ಸಾಮಾನ್ಯವಾಗಿ ತನ್ನ ಮನೋಭಾವಕ್ಕೆ ಅನುಗುಣವಾಗಿಯೇ ಪ್ರಪಂಚದ ಹಲವು ಸಂಗತಿಗಳನ್ನು ನೋಡಿರುತ್ತಾನೆ. ಆದಕಾರಣ ಯಾರೋ ಒಬ್ಬ ಜಗನ್ನಾಥನ ದರ್ಶನಕ್ಕೆ ಪುರಿಗೆ ಹೋದವಳು ಬಸಳೆ ಚಪ್ಪರ [೨] ನೋಡಿದರೆ ಆಶ್ಚರ್ಯವೇನೂ ಇಲ್ಲ. ೧೯೦೮ರ ಕೊನೆಯ ಭಾಗದಲ್ಲಿ ನಾನು ವಿದ್ಯಾರ್ಥಿದೆಸೆಯಲ್ಲಿದ್ದಾಗ, ಮೂರು ಮಂದಿ ಸ್ನೇಹಿತರೊಡನೆ ಜಯರಾಮಬಾಟಿಗೆ ಹೋಗಿ, ಶ್ರೀಮಾತೆಯವರನ್ನು ಮೊದಲ ಬಾರಿಗೆ ದರ್ಶನ ಮಾಡಿದೆ. ದುಃಖದ ಸಂಗತಿಯೆಂದರೆ, ಆ ದರ್ಶನದ ಅಸ್ಪಷ್ಟವಾದ ನೆನಪಷ್ಟೇ ಈಗ ನನ್ನ ಮನಸ್ಸಿನಲ್ಲಿ ಉಳಿದಿದೆ. ಎರಡನೆಯ ಬಾರಿ ನಾನು ಜಯರಾಮಬಾಟಿಗೆ ಹೋಗಿದ್ದುದು ೧೯೧೦ರ ಬೇಸಗೆ ಆರಂಭವಾದಾಗ; ರಾಮಕೃಷ್ಣ ಮಠ-ಮಿಷನ್ನಿನ ಹಿಂದಿನ ಅಧ್ಯಕ್ಷರಾಗಿದ್ದ ಪೂಜ್ಯ ವಿರಜಾನಂದ ಸ್ವಾಮೀಜಿಯವರೊಂದಿಗೆ. ಆಗ ಅವರು ಮಾಯಾವತಿ ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದರು. ನೆನಪಿದೆ, ಶ್ರೀಮಾತೆಯವರು ತಮ್ಮ ಪ್ರೀತಿಯ ಶಿಷ್ಯನಿಗೆ ವಿಶೇಷ ಕಾಳಜಿ ವಹಿಸಿ, ಊಟ ಬಡಿಸುವುದರಲ್ಲಿ ಮಗ್ನರಾಗಿರುತ್ತಿದ್ದರು. ಆಗ ಅವರ ಬಾಯಿಯಿಂದ ನಾನು ಕೇಳಿದ್ದೆ, ಶ್ರೀರಾಮಕೃಷ್ಣರೇ ಎಲ್ಲವೂ ಆಗಿದ್ದಾರೆ; ಸಾಧನೆ-ಭಜನೆಗಳನ್ನು ಮಾಡುವುದು ಎಲ್ಲರಿಗೂ ಸಾಧ್ಯವಿಲ್ಲ ; ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಯಾವಾಗಲೂ ತಲೆಯನ್ನು ತಣ್ಣಗಿರಿಸಿಕೊಳ್ಳಬೇಕು; ರಾಮಕೃಷ್ಣ ಮಹಾಸಂಘದ ಕೆಲಸಗಳೆಲ್ಲ ಶ್ರೀರಾಮಕೃಷ್ಣರ ಕೆಲಸಗಳೇ ಎಂದಿದ್ದರು. ೧೯೧೩ರ ಕೊನೆಯ ಭಾಗದಿಂದ ಆರಂಭಿಸಿ ಎರಡು ವರ್ಷಗಳ ಕಾಲ ನಾನು 'ಉದ್ಬೋಧನ'ದಲ್ಲಿ ವಾಸವಾಗಿದ್ದಾಗ, ಶ್ರೀಮಾತೆಯವರು ಕಲ್ಕತ್ತೆಗೆ ಬಂದಾಗಲೆಲ್ಲ ಅವರ ದರ್ಶನವನ್ನು ಪ್ರತಿದಿನವೂ ಪಡೆಯುವ ಸುಯೋಗ ನನ್ನದಾಗಿತ್ತು. ಆದರೆ ಅವರ ಬಳಿ ಏನನ್ನಾದರೂ ಕೇಳುವ ಪ್ರೇರಣೆ ನನ್ನ ಮನಸ್ಸಿನಲ್ಲಿ ಮೂಡಲಿಲ್ಲ. ಅವರ ಪಾದಗಳ ಬಳಿ ವಾಸಿಸುತ್ತಿದ್ದೇನೆ — ಇದನ್ನು ಭಾವಿಸಿಕೊಳ್ಳುತ್ತ ನಾನು ತೃಪ್ತಿಯನ್ನು ಅನುಭವಿಸುತ್ತಿದ್ದೆ.

೧೯೧೮ರಲ್ಲಿ , ಜಯರಾಮಬಾಟಿಯಲ್ಲಿ ನಾನು ಅವರ ಅಂತಿಮ ದರ್ಶನವನ್ನು ಪಡೆದೆ. 'ಉದ್ಬೋಧನ'ದಲ್ಲಾಗಲಿ, ಅಥವಾ ಬೇರೆ ಸ್ಥಳದಲ್ಲಾಗಲಿ ಹತ್ತು ಹಲವು ಘಟನೆಗಳ ನಡುವೆ ಅವರ ಸಹಜವಾದ, ಅಕೃತ್ರಿಮವಾದ ಮಾತೃಪ್ರೇಮದ ಹಾಗೂ ಅಹೇತುಕವಾದ ಕರುಣೆಗೆ ಸಾಕ್ಷಿಯಾಗುವ ಮೂಲಕ ನಾನು ಧನ್ಯನಾದೆ. ಇದರಲ್ಲಿ ನಮ್ಮ ಸಾಧನೆಯೇನೂ ಇಲ್ಲ , ಎಲ್ಲವೂ ಅವರ ಜಗನ್ಮಾತೆಯ ವ್ಯಕ್ತಿತ್ವಕ್ಕೆ ಸುಲಭಸಾಧ್ಯವಾದ ಮಹಿಮೆ. ಆದರೆ ಮುಂದೆ ಅವರ ಭಕ್ತರುಗಳು ಬರೆದ ಸ್ಮೃತಿಲೇಖನಗಳನ್ನು ನಾನು ಓದಿದಾಗ ಒಂದೊಂದು ಬಾರಿ ಅನ್ನಿಸಿದ್ದಿದೆ, ಶ್ರೀಮಾತೆಯವರ ಬಳಿ ಈ ಬಗ್ಗೆ ತುಸು ಕೇಳಿ ತಿಳಿದಿದ್ದರೆ ಆಗುತ್ತಿತ್ತು — ಎಂದು. ಆದರೆ ಅವರ ಮಾತುಗಳಿಂದ ನಮಗೆ ತಿಳಿದು ಬರುವ ಭರವಸೆಯೇನೆಂದರೆ, ಅವರು ದೀಕ್ಷೆ ನೀಡುವ ಸಮಯ ದಲ್ಲೇ ತಮ್ಮ ಶಿಷ್ಯಂದಿರಿಗೆ ಏನು ನೀಡಬೇಕೋ, ಅವರಿಗೆ ಏನನ್ನು ಮಾಡಬೇಕೋ ಅದನ್ನೆಲ್ಲ ಮಾಡಿಬಿಟ್ಟಿರುತ್ತಾರೆ ಎಂದು. ಇದುವೇ ಸಾಮಾನ್ಯ ಗುರುವಿಗೂ ಶ್ರೀಮಾತೆಯವರಿಗೂ ಇರುವ ವ್ಯತ್ಯಾಸ.


ಸ್ವಾಮಿ ಮಾಧವಾನಂದ

ಶ್ರೀಮಾತೆಯವರು ತಮ್ಮ ಸ್ಥೂಲಶರೀರವನ್ನು ತ್ಯಾಗ ಮಾಡಿದ್ದರೂ, ಶ್ರೀರಾಮಕೃಷ್ಣರಂತೆ ಅವರೂ ಸೂಕ್ಷ್ಮಶರೀರದಿಂದ ಜೀವಂತವಾಗಿದ್ದಾರೆ. ಶ್ರೀರಾಮಕೃಷ್ಣರು ಆರಂಭಿಸಿದ ಜೀವೋದ್ಧಾರ ಕಾರ್ಯವನ್ನು ಪೂರ್ಣಗೊಳಿಸಲೆಂದೇ ಅವರು ತಮ್ಮ ಪತಿಯ ನಿರ್ಯಾಣದ ನಂತರವೂ, ಅಷ್ಟೊಂದು ದೀರ್ಘಕಾಲ ಸ್ವಂತ ಇಚ್ಛೆಯಿಂದಲೇ ಮಾಯೆಯನ್ನು ಆಧರಿಸಿಕೊಂಡು ಈ ಪ್ರಪಂಚದಲ್ಲಿ ಜೀವಿಸಿದರು. ಧರ್ಮವೆಂಬ ಜಗತ್ತಿನ ಇತಿಹಾಸದಲ್ಲೇ ಅವರಿಗೆ ತುಲನೆ ಮಾಡಬಲ್ಲ ವ್ಯಕ್ತಿ ಬೇರೊಬ್ಬರು ಸಿಗಲಾರರು. ಶಿವ-ಶಕ್ತಿಯರ ಈ ಅಪೂರ್ವ ಲೀಲೆಯನ್ನು ಧ್ಯಾನಿಸುವ ಸುಯೋಗ ನಮಗೆ ದೊರೆತಿರುವುದರಿಂದ ನಾವೆಲ್ಲರೂ ಧನ್ಯರಾಗಿದ್ದೇವೆ. ಮಹಾ ಪುರುಷರುಗಳು ದೇಹತ್ಯಾಗ ಮಾಡಿದ ನಂತರ ಅವರ ಆಧ್ಯಾತ್ಮಿಕ ಶಕ್ತಿ ಇನ್ನಷ್ಟು ವ್ಯಾಪಕವಾಗಿ ಕಾರ್ಯ ನಿರ್ವಹಿಸುವುದು. ಜಗತ್ತಿನ

> "ಗುರುವಾಕ್ಯದಲ್ಲಿ ವಿಶ್ವಾಸವನ್ನಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು. ಆತನ ಮಾತಿನಲ್ಲಿ ವಿಶ್ವಾಸವನ್ನಿಟ್ಟರೆ, — ಬಾಲಕನ ಹಾಗೆ ವಿಶ್ವಾಸವನ್ನಿಟ್ಟರೆ, ಭಗವಂತ ದೊರೆತುಬಿಡುತ್ತಾನೆ. ಬಾಲಕನದು ಎಂಥ ವಿಶ್ವಾಸ! "
>
> — ಶ್ರೀರಾಮಕೃಷ್ಣರು

---

೨ ಒಬ್ಬಾಕೆ ವೃದ್ಧೆ ಜಗನ್ನಾಥ ದರ್ಶನ ಮಾಡಲು ಪುರಿಗೆ ಹೋಗಿದ್ದಳಂತೆ. ಹೋಗುವಾಗ ಅವಳ ಮನಸ್ಸಿನಲ್ಲೆಲ್ಲಾ ಒಂದು ಅನವಶ್ಯಕ ಆಲೋಚನೆಯೇ ನಡೆಯುತ್ತಿತ್ತು. ಅವಳ ಮನೆಯಲ್ಲಿ ಒಂದು ಎಳೆಯ ಬಸಳೆ ಸೊಪ್ಪಿನ ಬಳ್ಳಿಯಿತ್ತು; ಅದು ಬೆಳೆಯುತ್ತಿತ್ತು. ಅದಕ್ಕೊಂದು ಚಪ್ಪರ ಹಾಕಿಸಿದಳು. ಅದನ್ನು ದನ, ಆಡುಕುರಿಗಳು ತಿಂದು ಹೋಗದಂತೆ ಎಚ್ಚರ ವಹಿಸಬೇಕೆಂದು ತನ್ನ ಸೊಸೆಗೆ ಪದೇಪದೇ ಹೇಳಿದ್ದಳು. ಆ ಬಸಳೆ ಸೊಪ್ಪನ್ನು ಸೊಸೆ ಚೆನ್ನಾಗಿ ನೋಡಿಕೊಳ್ಳುತ್ತಿರುವಳೇ, ಅದನ್ನು ಆಡು, ಕುರಿ ತಿಂದಿಲ್ಲ ತಾನೇ? ಎಂದೆಲ್ಲ ಅವಳು ಯೋಚಿಸುತ್ತಲೇ ಇದ್ದಳು. ಕೊನೆಗೆ ಅವಳು ಪುರಿ ಜಗನ್ನಾಥನ ಮಂದಿರದಲ್ಲಿ ವಿಗ್ರಹದ ದರ್ಶನ ಮಾಡಿದಾಗ, ಜಗನ್ನಾಥನ ವಿಗ್ರಹದ ಪೀಠದಲ್ಲಿ ಬಸಳೆ ಸೊಪ್ಪಿನ ಚಪ್ಪರವನ್ನೇ ಕಂಡಳಂತೆ! *(-ಸಂ)*